**ಒಂದನೇ ಅಪರ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ**

**ಸಿ ಸಿ 131/2007**

ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರ
(ಕನಕಪುರ ವಲಯ )

ವಿರುದ್ಧ

ಆರೋಪಿ: ಶ್ರೀಮತಿ ಟಿ.ಎನ್ ಚಂದ್ರಕಲಾ
ಸಂತೆ ಕೋಡಿಹಳ್ಳಿ ಮತ್ತು ಅಂಚೆ
ಕನಕಪುರ ತಾಲ್ಲೂಕು

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ 1: ಈ ಪ್ರಕರಣದ ಈವರೆಗೆ ನಡೆಸಿದ ಸಾಕ್ಷಿಯ ವಿಚಾರಣೆಯನ್ನು ಕೇಳಿದ್ದಿರಾ?
ಆರೋಪಿಯ ಉತ್ತರಃ

ಪ್ರಶ್ನೆ 2: ಪ್ರಾಸಾ-1 ಎನ್ ಜಯರಾಜ್ ಇವರು ತಮ್ಮ ಸಾಕ್ಷಿಯಲ್ಲಿ, ತಾನು 2006 ರಲ್ಲಿ ಹುಣಸೂರಿನಲ್ಲಿ ಫಾರೆಸ್ಟ್ ಸರ್ವೆಯರ್ ಎಂದು ಕೆಲಸ ಮಾಡುತ್ತಿದ್ದರು, ದಿಃ18-4-2006 ರಂದು ಸರ್ಕಾರದ ಆದೇಶದ ಪ್ರಕಾರ ತನ್ನನ್ನು ಕನಕಪುರಕ್ಕೆ ನಿಯೋಜಿಸಿದ್ದರು, ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಅದರ ಬಗ್ಗೆ ವರದಿ ನೀಡುವಂತೆ ನಮ್ಮ ಟೀಮ್ ಲೀಡರ್ ರವರಿಗೆ ಆದೇಶವಾಗಿದ್ದು ತಮ್ಮ ಟೀಮ್ ಲೀಡರ್ ರೇಂಜ್ ಆಫಿಸರ್ ನಾಗರಾಜು ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ರೆವಿನ್ಯೂ ಇಲಾಖೆ, ಅರಣ್ಯ ಇಲಾಖೆಯವರು ಜಂಟಿಯಾಗಿ ಸರ್ವೆ ಕಾರ್ಯ ಮಾಡಿದ್ದು, ಅದರಲ್ಲಿ ತಾನು ಭಾಗವಹಿಸಿದ್ದರು ತಾವು ಸಿದ್ದರಬೆಟ್ಟ ಕಿರುಅರಣ್ಯಕ್ಕೆ ಹೋಗಿ ಬಿಜ್ಜಹಳ್ಳಿ ಗ್ರಾಮದ ಸರ್ವೆ ನಂ.27 ರಲ್ಲಿ ತಾವು ಸರ್ವೆ ಮಾಡಿದ್ದು ಸರ್ವೆ ನಂ.27 ರಲ್ಲಿ ರೆವಿನ್ಯೂ ಮತ್ತು ಅರಣ್ಯ ಭೂಮಿ ಇದ್ದು, ತಾವು ಸರ್ವೆ ಮಾಡಿದ ಜಾಗ ಅರಣ್ಯ ಇಲಾಖೆಗೆ ಸೇರಿದ ಜಾಗ ಜಂಟಿಯಾಗಿ ನಕ್ಷೆಯನ್ನು ತಯಾರಿಸಿ ತಮ್ಮ ವರದಿಯನ್ನು ನೀಡಿರುತ್ತಾರೇ ಆರೋಪಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಸದರಿ ಸರ್ವೆ ನಂಬರ್ ನಲ್ಲಿ 4 ಎಕರೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದರು. ಸದರಿಯವರು ಆ ಜಾಗದಲ್ಲಿ ಗಣಿಗಾರಿಕೆಯನ್ನು ನಡೆಸುತ್ತಿದ್ದರು. ಸದರಿಯವರು ಸದರಿ 4 ಎಕರೆ ಜೊತೆಗೆ 3 ಎಕರೆ ಹೆಚ್ಚುವರಿಯಾಗಿ ಸರ್ವೆ ನಂ.27 ರ ಅರಣ್ಯದ ಜಮೀನಿನಲ್ಲಿ ಒತ್ತುವರಿ ಮಾಡಿದ್ದರು. ಸದರಿ ಹೆಚ್ಚುವರಿ ಗಣಿಗಾರಿಕೆ ಮಾಡಿದ ಜಾಗಕ್ಕೆ ಅವರು ಪರವಾನಿಗೆ ಹೊಂದಿರಲಿಲ್ಲ. ತನಗೆ ದಾಖಲೆಗಳ ಆಧಾರದ ಮೇಲೆ ಚಂದ್ರಕಲಾ ಎನ್ನುವವರು ಗಣಿಗಾರಿಕೆ ಮಾಡುತ್ತಿದ್ದ ಬಗ್ಗೆ ಗೊತ್ತಿದೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು

ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 3: ಪ್ರಾಸಾ-2 ಜೆ.ಸಿ ಲಿಂಗರಾಜು ಸಹಾಯಕ ಅರಣ್ಯ ಸಂರಕ್ಷಾಧಿಕಾರಿ ಇವರು ತಮ್ಮ ಸಾಕ್ಷಿಯಲ್ಲಿ, ದಿನಾಂಕ 20.12.2006 ರಂದು ರಾಮದೇವರ ಬೆಟ್ಟ ಗಸ್ತಿನ ಅರಣ್ಯ ಸಿಬ್ಬಂದಿಯಾದ ನಾಗರಾಜು ರವರು ಅಕ್ರಮ ಗಣಿಗಾರಿಕೆ ಆಗುತ್ತಿದ್ದ ಬಗ್ಗೆ ಪ್ರ.ವ ವರದಿಯನ್ನು ದಾಖಲಿಸಿದ್ದರು, ತಾನು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಯಾಗಿ ನೇಮಕಗೊಂಡು ಆರೋಪಿಗೆ ದಿಃ07.10.2006 ರಂದು ನೊಟೀಸು ಕೊಟ್ಟಿರುತ್ತಾರೆ, ತಾನು ಆರೋಪಿಯ ಹೇಳಿಕೆಯನ್ನು, ತನಿಖಾ ವರದಿಯ ನಕಾಶೆ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವರದಿ ಮತ್ತು ಮಹಜರ್ ಹಾಗೂ ಅಮಾನತು ವರದಿಯ ಮೇರೆಗೆ ತನ್ನ ವಿಚಾರಣಾ ವರದಿಯನ್ನು ಉಪ ಅರಣ್ಯಾ ಸಂರಕ್ಷಣಾಧಿಕಾರಿಯವರಿಗೆ ದಿಃ20.12.2006 ರಂದು ಸಲ್ಲಿಸಿರುತ್ತಾರೆ, ತದನಂತರ ದಿಃ22.12.2006 ರಂದು ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಆದೇಶವನ್ನು ತನಗೆ ಕೊಟ್ಟಿದ್ದರು, ನಂತರ ದಿಃ08.01.2007 ರಂದು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ, ತನ್ನ ಸಿಬ್ಬಂದಿಗಳಾದ ಚಾಸಾ-1 ಮತ್ತು 2 ರವರ ವಿಚಾರಣೆಯನ್ನು ಮಾಡಿರುತ್ತಾರೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 4: ಪ್ರಾಸಾ-3 ನಿಜಗುಣ ನಿವೃತ್ತ Assistant Engineer ಇವರು ತಮ್ಮ ಸಾಕ್ಷಿಯಲ್ಲಿ, ದಿಃ 28.04.2006 ರಂದು ಚಾಸಾ-15 ರವರ ನಿರ್ದೇಶನದ ಮೇರೆಗೆ ಚಾಸಾ-1 ನಾಗರಾಜು, ಚಾಸಾ-6 ರವಿ, ಚಾಸಾ-2, ಚಾಸಾ-9, ಚಾಸಾ-10 ಮತ್ತು ಚಾಸಾ-8 ರವರ ಸಮಕ್ಷಮದಲ್ಲಿ ಜಂಟಿ ಮೋಜನಿ ಮಾಡಿ ನಕಾಶೆಯನ್ನು ತಯಾರು ಮಾಡಿರುತ್ತಾರೆ, ಸದರಿ ನಕಾಶೆಯನ್ನು ಚಾಸಾ-15 ರವರಿಗೆ ನೀಡಿರುತ್ತಾರೆ, ಸದರಿ ನಿಪಿ-1 ರಲ್ಲಿ ಸರ್ವೆ ನಂ.27 ರಲ್ಲಿ 7 ಎಕರೆ ಜಮೀನನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಕಲ್ಲು ಗಣಿಗಾರಿಕೆಯನ್ನು ಮಾಡಿದ್ದರು ಹಾಗೂ ಷ್ಯಾಜ್ಯಗಳನ್ನು ಹಾಕಿದ್ದರು. ಆ ಬಗ್ಗೆ ನಿಪಿ-1 ರಲ್ಲಿ ನಮೂದು ಮಾಡಿರುತ್ತಾರೆ, ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 5: ಪ್ರಾಸಾ-6 ನಾಗರಾಜ ಆರ್ Deputy Conservator Forest ಇವರು ತಮ್ಮ ಸಾಕ್ಷಿಯಲ್ಲಿ, ತಾನು ಶ್ರೀಮಂಗಳ ವನ್ಯಜೀವಿ ವಿಭಾಗದಲ್ಲಿ ಆಗ ಕೆಲಸ ಮಾಡುತ್ತಿದ್ದರು ಆಗ ಯುಪಿ ಸಿಂಗ್ ರವರ ನೇತೃತ್ವದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ವಿಚಾರಕ್ಕೆ

ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ ಎಂದು ತಂಡಗಳನ್ನು ನೇಮಿಸಿದ್ದರು ತನ್ನನ್ನು ಆ ತಂಡದ ಪೈಕಿ ಒಂದು ತಂಡದಲ್ಲಿ ನೇಮಕ ಮಾಡಿದ್ದರು. ಅದರಂತೆ ಆ ತಂಡದಲ್ಲಿ ನನ್ನೊಂದಿಗೆ ರೆವಿನ್ಯೂ ಸರ್ವೆಯರ್, ಅರಣ್ಯ ಇಲಾಖೆಗೆ ಸಂಬಂಧಿಸಿದ ಸರ್ವೆಯರ್ ಮತ್ತು ಡೆಪ್ಯೂಟಿ ರೇಂಜ್ ಆಫೀಸರ್, ಮೈನಿಂಗ್ ಇಲಾಖೆಯ ಜೇಇ ರವರು ಇದ್ದರು. ತಾವುಗಳು ದಿಃ28.04.2006 ರಂದು ಬಿಜ್ಜಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.27 ಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿ, ಸರ್ವೆ ಮಾಡಿ ಅಳತೆ ಮಾಡಿ ಅಲ್ಲಿ 7 ಎಕರೆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ಆಗಿದೆ ಎಂಬ ಬಗ್ಗೆ ವರದಿ ತಯಾರಿಸಿ ಅದಕ್ಕೆ ಸಹಿ ಮಾಡಿ ಸಲ್ಲಿಸಿರುತ್ತಾರೆ. ತಾವು ಸಲ್ಲಿಸಿದ ಸ್ಕೆಚ್ ವರದಿಯನ್ನು ನೋಡಿ ಗುರುತಿಸುತ್ತಾರೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 6: ಪ್ರಾಸಾ-7 ಶ್ರೀಮತಿ ಸಣ್ಣಬೋರಮ್ಮ ನಿವೃತ್ತ ಜಂಟಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ಇವರು ತಮ್ಮ ಸಾಕ್ಷಿಯಲ್ಲಿ, ಕನಕಪುರದಲ್ಲಿ ಗ್ರಾನೈಟ್ ಕಲ್ಲುಗಳ ಸಂಬಂಧ ತಮ್ಮ ಇಲಾಖೆ ಹಾಗೂ ಕಂದಾಯ, ಅರಣ್ಯ ಇಲಾಖೆಯವರು ಜಂಟಿ ಮೋಜಣಿಯ ಮೂಲಕ ಹಾಗೂ ತಮ್ಮ ಇಲಾಖೆಯ ಭೂ ವಿಜ್ಞಾನಿಗಳು ಮತ್ತು ಅಭಿಯಂತರರು ಸದರಿ ಜಂಟಿ ಮೋಜಣಿಯ ಕಾರ್ಯದಲ್ಲಿ ಭಾಗವಹಿಸಿದ್ದು ಅದರಂತೆ ವಲಯ ಕನಕಪುರದ ವಲಯ ಅರಣ್ಯಾಧಿಕಾರಿಗಳು ದಿನಾಂಕ 18.11.2006 ರಂದು ತಮ್ಮ ಕಚೇರಿಗೆ ಒಂದು ಪತ್ರ ಬರೆದಿರುತ್ತಾರೆ. ಸದರಿ ಪತ್ರದಲ್ಲಿ ಕನಕಪುರ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಅಲಂಕಾರಿಕ ಗ್ರಾನೈಟ್ ಕಲ್ಲುಗಳನ್ನು ಅರಣ್ಯ ವ್ಯಾಪ್ತಿಯನ್ನು ಅತಿಕ್ರಮ ಮಾಡಿ ಗಣಿಗಾರಿಕೆ ಸಾಗಣಿಕೆ ಹಾಗೂ ದಾಸ್ತಾನು ಮಾಡಿದ ವಿವರಗಳ ಪಟ್ಟಿಯನ್ನು ತಮಗೆ ನೀಡಿದ್ದು ಈ ಸಂಬಂಧ ಖನಿಜ ಮೌಲ್ಯವನ್ನು ತಿಳಿಸುವಂತೆ ತಮ್ಮನ್ನು ಕೋರಿದ್ದರು, ಅದರಂತೆ ತಾನು ದಿಃ18.11.2006 ರಂದು ಸದರಿ ಪತ್ರಕ್ಕೆ ಪರೀಶೀಲನೆ ಮಾಡಿ ತನ್ನ ವರದಿಯಲ್ಲಿ ಭೂ ವಿಜ್ಞಾನ ತಾಂತ್ರಿಕ ವರದಿಯ ಮೇಲೆ ಕ್ರಮ ಸಂಖ್ಯೆ 19 ರ ಪ್ರಕಾರ ಕಚೇರಿಯಿಂದ ಪರವಾನಿಗೆ ಪಡೆದ 346.020 ಕ್ಯೂಬಿಕ್ ಮೀಟರ್ ಗಳಿಗೆ ಖನಿಜ ಮೌಲ್ಯ 10 ಲಕ್ಷದ 38 ಸಾವಿರದ 60 ರೂಗಳು ಹಾಗೂ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರಮ 10 ದಿಂಬಿಗಳಿಗೆ 83.613 ಕ್ಯೂಬಿಕ್ ಮೀಟರ್ ಖನಿಜ ಮೌಲ್ಯ 2 ಲಕ್ಷದ 50 ಸಾವಿರ ಹಾಗೂ ಚಿಲ್ಲರೆಯಷ್ಟು ಖನಿಜ ಮೌಲ್ಯವನ್ನು ಕರ್ನಾಟಕ ಉಪಖನಿಜ ನಿಯಮಾವಳಿಯ 94 ರ ಅನುಸಾರ clasification as per form No.O ರಂತೆ ಖನಿಜ ಮೌಲ್ಯವನ್ನು ನಿರ್ಧರಿಸಿ ಸದರಿ ದಿನ ತನ್ನ ವರದಿಯನ್ನು ವಲಯ ಅರಣ್ಯಾಧಿಕಾರಿ ಕನಕಪುರ ವಲಯ ಕನಕಪುರ ರವರಿಗೆ ಸಲ್ಲಿಸಿರುತ್ತಾರೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 7: ಪ್ರಾಸಾ-8 ಆರ್. ಎನ್ ಲಕ್ಷ್ಮಣ ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಇವರು ತಮ್ಮ ಸಾಕ್ಷಿಯಲ್ಲಿ, 2005ನೇ ಮೇ ತಿಂಗಳಿನಿಂದ 2007 ನೇ ಇಸವಿ ಆಗಸ್ಟ್ ತಿಂಗಳವರೆಗೂ ತಾನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕನಕಪುರ ವಲಯದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ, ದಿಃ29.05.2006 ನೇ ಇಸವಿಯಲ್ಲಿ ಪ್ರಕರಣದ ಪ್ರ.ವವ ದಾಖಲಾದ ನಂತರ ಕೃತ್ಯ ನಡೆದ ಸ್ಥಳದಲ್ಲಿ ಅಮಾನತು ಪಡಿಸಿಕೊಳ್ಳಲಾದ ಬ್ಲಾಕ್ಸ್ ಗಳ ಅಳತೆಯನ್ನು ಹಾಗೂ ಗುಂಡಿಗಳ ಅಳತೆಯನ್ನು ಮಾಡಿರುತ್ತಾರೆ. ಈ ಸಂಬಂಧ ತಾನು ವರದಿಯನ್ನು ಮೇಲಾಧಿಕಾರಿಗೆ ಸಲ್ಲಿಸಿರುತ್ತಾರೆ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 8: ಪ್ರಾಸಾ-9 ಡಾ.ಯು. ವಿ ಸಿಂಗ್ ಇವರು ತಮ್ಮ ಸಾಕ್ಷಿಯಲ್ಲಿ, ತಾನು ಸದರಿ ತಂಡಗಳಲ್ಲಿ ರೆವಿನ್ಯೂ ಇಲಾಖೆ, ಭೂ ಮತ್ತು ಗಣಿ ಇಲಾಖೆ, ಅರಣ್ಯ ಇಲಾಖೆಯ ವತಿಯಿಂದ ಸರ್ವೆಯರ್ ಗಳನ್ನು ನಿಯೋಜಿಸಿರುತ್ತೇನೆ. ಅದೇ ರೀತಿ ಸದರಿ ತಂಡಕ್ಕೆ ಸಹಾಯ ಮಾಡುವ ಉದ್ದೇಶದಿಂದ ಗ್ರಾಮ ಲೆಕ್ಕಾಧಿಕಾರಿಗಳನ್ನು ಸಹ ತಂಡಕ್ಕೆ ಸೇರಿಸಿಕೊಳ್ಳಲಾಗಿರುತ್ತದೆ. ಎ ಡಿ ಎಲ್ ಆರ್ ವತಿಯಿಂದ ಅಧಿಕಾರಿಯು ಇದರ ಮೇಲ್ವಿಚಾರಣೆಗೆ ಇರಿಸಲಾಗಿತ್ತು. ಪ್ರಸ್ತುತ ಪ್ರಕರಣದಲ್ಲಿ ಬಿಜ್ಜಹಳ್ಳಿಯ ಸರ್ವೆ ನಂ.27 ರಲ್ಲಿ ಒಟ್ಟು 4 ಎಕರೆ ವಿಸ್ತೀರ್ಣವಿದ್ದು ಅದರಲ್ಲಿ ಆರೋಪಿಗೆ 2004-05 ರಲ್ಲಿ ಸರ್ಕಾರವೂ ಗಣಿಗಾರಿಕೆ ಮಾಡಲು ಪರವಾನಿಗೆ ನೀಡಿರುತ್ತಾರೆ, ಸದರಿ ಪ್ರದೇಶದಲ್ಲಿ ಪೂರ್ತಿ ಭಾಗವೂ ಸಿದ್ದರಬೆಟ್ಟ ಕಿರು ಅರಣ್ಯ ಪ್ರದೇಶಕ್ಕೆ ಸೇರಿದ ಜಾಗವಾಗಿರುತ್ತದೆ. ಇದರ ಜೊತೆಗೆ 4.06 ಎಕರೆ ಜಾಗವನ್ನು ಅತಿಕ್ರಮ ಪಡಿಸಿಕೊಂಡು ಗಣಿಗಾರಿಕೆ ಮಾಡುತ್ತಿದ್ದರು. ಇದರಲ್ಲಿ 3 ಎಕರೆ ಪ್ರದೇಶದಲ್ಲಿ ಕ್ವಾರೆ ನಡೆದಿದ್ದು ಉಳಿದ 1.06 ಜಾಗವನ್ನು ರಸ್ತೆಗೆ ಉಪಯೇಗಿಸಿಕೊಳ್ಳಲಾಗಿತ್ತು. ಪ್ರಸ್ತುತ ಸ್ಥಳದಲ್ಲಿ ನಮ್ಮ ತನಿಖಾ ತಂಡವೂ ಸರ್ವೆ ಮಾಡಿ ಪರಿಶೀಲನೆ ಮಾಡಿದಾಗ ಸದರಿ ಪ್ರದೇಶದಲ್ಲಿ 4.06 ಎಕರೆ ಅರಣ್ಯ ಪ್ರದೇಶದ ಜಾಗವನ್ನು ಒತ್ತುವರಿ ಮಾಡಲಾಗಿದೆ ಎಂದು ಕಂಡು ಬಂದಿರುವುದಾಗಿ ಅದರಂತೆ ತನಗೆ ವರದಿ ಮಾಡಿದ್ದು ತಾನು ಪರಿಶೀಲನೆ ಮಾಡಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಕೊಟ್ಟಿರುತ್ತಾರೆ, ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಆರೋಪಿಯ ಉತ್ತರಃ

ಪ್ರಶ್ನೆ 9: ಸದರಿ ಪ್ರಕರಣದಲ್ಲಿ ಅಭಿಯೋಜನೆಯು ತಮ್ಮ ವಿರುದ್ಧ ನಿಶಾನೆ 1 ಜಂಟಿ ಸರ್ವೆ ನಕ್ಷೆ , ನಿಶಾನೆ 2 ನೊಟೀಫಿಕೇಶ್ , ನಿಶಾನೆ 3 ಆರೋಪಿಗೆ ನೀಡಿದ ನೊಟೀಸ್, ನಿಶಾನೆ 4 ವಿಚಾರಣಾ ವರದಿ, ನಿಶಾನೆ 5 ಮೇಲಾಧಿಕಾರಿಗಳು ನೀಡಿದ ಆದೇಶ, ನಿಶಾನೆ 6 ಮಹಜರ್, ನಿಶಾನೆ 7 ಮತ್ತು 8 ವರದಿ ಹಾಗೂ ದೋಷಾರೋಪಣಾ ಪಟ್ಟಿಯಲ್ಲಿರುವ ಸಾಕ್ಷಿಗಳ ಹೇಳಿಕೆಗಳನ್ನು ಸಲ್ಲಿಸಿ ಆರೋಪಿಯಾದ ನೀವು ಅಭಿಯೇಜನೆಯು ಮಾಡಿರುವಂತ

ಆರೋಪಣೆಯನ್ನು ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಸಾಕ್ಷ್ಯಧಾರವನ್ನು ಒದಗಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ 10: ನಿಮಗೆ ಬೇರೆ ಏನಾದರೂ ಹೇಳುವುದು ಇದೆಯಾ?
ಆರೋಪಿಯ ಉತ್ತರಃ

ಪ್ರಶ್ನೆ 11 : ನಿಮ್ಮ ಪರ ಸಾಕ್ಷಿದಾರರ ಇದ್ದಾರೆಯೇ?
ಆರೋಪಿಯ ಉತ್ತರಃ

(ಮೇಲ್ಕಂಡ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಕೇಳಲಾಯಿತು, ಆರೋಪಿ ಕೊಟ್ಟ ಉತ್ತರಗಳನ್ನು ಯಥಾಸ್ಥಿತಿ ಬರೆದುಕೊಂಡ ಪ್ರಕಾರ ದೃಢೀಕರಿಸಲಾಗಿದೆ )

ದಿನಾಂಕ 01.04.2026

(ಲತಾಶ್ರೀ ಬಿ.ವಿ )
ಅಧಿಕ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕನಕಪುರ.